(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಮುಂಭಾಗದಲ್ಲಿ ಕುಳಿತಿರುವವರು ನಿಮ್ಮ ಹತ್ತಿರ ದಾಖಲೆ ಇದ್ದರೆ ತೆಗೆದುಕೊಂಡು ಇಲ್ಲಿ ಇಡಿ. ಸ್ಟೇಟ್‌ಮೆಂಟ್ ಮಾಡಿ ಎನ್ನುತ್ತಿದ್ದಾರೆ. ಎಲ್ಲವೂ ಚರ್ಚೆಯಾಗಲಿ ಎನ್ನುತ್ತಿದ್ದಾರೆ. ತಮ್ಮ ಹತ್ತಿರ ದಾಖಲೆಗಳನ್ನು ಕೊಡುತ್ತೇನೆ. ತಾವು ಏನು ಹೇಳುತ್ತೀರೋ ಆ ಪ್ರಕಾರ ನಡೆದುಕೊಳ್ಳುತ್ತೇನೆ. ತಾವು ಹೇಳಿದ್ದನ್ನು ಪರಿಪಾಲನೆ ಮಾಡುತ್ತೇನೆಯೇ ಹೊರತು ಬೇರೆಯವರು ಹೇಳಿದ್ದನ್ನು ಕೇಳುವುದಿಲ್ಲ. ಅಧ್ಯಕ್ಷರೆ, ಈಗಾಗಲೇ ತಾವು ದಾಖಲೆಗಳನ್ನು ನಿಮಗೆ ಕೊಡುವಂತೆ ನನಗೆ ಸದನದಲ್ಲಿ ಹೇಳಿದ್ದೀರಿ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ದಾಖಲಾತಿಗಳನ್ನು ತೋರಿಸಿ. ಇವೊತ್ತು ಯಾವ ಮಾತುಗಳನ್ನು ವೆಂಕಟೇಶ್ ರವರು ಹೇಳಿದ್ದಾರೆ ಆ ಪ್ರಕಾರ ನಡೆದುಕೊಂಡು ಅವರು ಮಾಡಿರುವ ಆರೋಪಗಳಿಗೆ ಏನೇನು ಚಿತ್ರಗಳಿವೆಯೋ ಅದನ್ನು ಸದನದಲ್ಲಿ ತೋರಿಸಲಿ. ಇವೊತ್ತು ಅದರ ಬಗ್ಗೆ ಚರ್ಚೆ ಆಗಬೇಕು. ಅಧ್ಯಕ್ಷರೆ, ತಾವು ಕೂಡ ನಿರ್ಣಯ ತೆಗೆದುಕೊಳ್ಳಬೇಕು. ಅದೇನು ರಹಸ್ಯವಿದೆಯೋ ಅದು ಬರಲಿ, ಒಂದು ರೀತಿಯಾಗಿ ಈ ರೀತಿ ಬ್ಲ್ಯಾಕ್‌ಮೇಲ್ ಮಾಡುವ ತಂತ್ರ. ಈ ರೀತಿ ಬ್ಲ್ಯಾಕ್‌ಮೇಲ್ ಮಾಡತಕ್ಕಂಥ ರೀತಿಯಲ್ಲಿ ಆರೋಪ ಮಾಡಿರುವಂತೆಯೇ ಈ ಸದನವನ್ನು ಮುಂದುವರೆಸುವುದಕ್ಕೆ ಸಾಧ್ಯವಿಲ್ಲ. ಆರೋಪ ಮಾಡಿರುವುದಕ್ಕೆ ದಾಖಲಾತಿಗಳು ಇದ್ದರೆ ಅದನ್ನು ಹೇಳಿ ತೋರಿಸಲಿ. ಆ ಬಗ್ಗೆ ಸಿ.ಬಿ.ಐ. ತನಿಖೆ ಆಗಬೇಕು. ಇದರ ಬಗ್ಗೆ ತೀರ್ಮಾನ ಆಗಲೇಬೇಕು. ಅಲ್ಲಿಯವರೆಗೂ ನಾವು ಧರಣಿ ಮಾಡುತ್ತೇವೆ.

(ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಗೆ ಬಂದು ಧರಣಿ ನಿರತರಾದರು)

ಅಧ್ಯಕ್ಷರು : ಮಾನ್ಯ ಸಮಾಜ ಕಲ್ಯಾಣ ಸಚಿವರು ಎಲ್ಲಾ ಮಾನ್ಯ ಸದಸ್ಯರುಗಳಿಗೆ ಭೋಜನವನ್ನು ಏರ್ಪಾಡು ಮಾಡಿದ್ದಾರೆ. ಆದಕಾರಣ ಎಲ್ಲರೂ ಭೋಜನ ಕೂಟದಲ್ಲಿ ಭಾಗವಹಿಸಬೇಕೆಂದು ಹೇಳುತ್ತಾ ಈಗ ಸದನವನ್ನು ಮಧ್ಯಾಹ್ನ 3.30 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2.23ಕ್ಕೆ ಮುಂದೂಡಿಲ್ಪಟ್ಟು ಮತ್ತೆ ಮಧ್ಯಾಹ್ನ 3.30 ಕ್ಕೆ ಪುನರ್ ಸಮಾವೇಶಗೊಳ್ಳುವಂತೆ ನಿಶ್ಚಯಿಸಿತು).